**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**

**ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 91/2020**

**ಚಾ.ಸಾಃ 9, ಫ್ರಾ.ಸಾಃ 5**

| | |
|---|---|
| ಸಾಕ್ಷಿದಾರನ ಹೆಸರು | ವಿನಾಯಕ ಭಟ್ಟ |
| ತಂದೆಯ ಹೆಸರು | ಸುಬ್ರಹ್ಮಣ್ಯ ಭಟ್ಟ |
| ವಯಸ್ಸು | 50 ವರ್ಷಗಳು |
| ಉದ್ಯೋಗ | ರೈತಾಬಿ |
| ವಾಸ್ತವ್ಯ | ಸಾಲ್ಕೋಡ, ಹೊನ್ನಾವರ |

**ಸಾಕ್ಷಿಯನ್ನು ದಿನಾಂಕಃ 17-02-2023 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ಸಾಕ್ಷಿಗೆ ಈ ಪ್ರಕರಣದ ನಿಪಿ-6 ಆಭರಣಗಳ ಜಪ್ತು ಪಂಚನಾಮೆಯ ನೈಜ ಪ್ರತಿಯನ್ನು ತೋರಿಸಲಾಗಿ ಅದರ ಮೇಲಿನ ಒಂದು ಸಹಿಯನ್ನು ತನ್ನದು ಎಂದು ತಿಳಿಸಿದ್ದರಿಂದ ಅದರ ಮೇಲಿನ ಸಾಕ್ಷಿ ಸಹಿಯನ್ನು ನಿಪಿ-6(ಬಿ)ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು ದಿನಾಂಕ 05-08-2020 ರಂದು ಹೊನ್ನಾವರ ಪೋಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಕಳ್ಳತನ ಆಗಿರುವ ಆಭರಣಗಳನ್ನು ಚಾಸಾ-14 ಅನಿಲ ಶೇಟರು ಹಾಜರು ಮಾಡುವುದಾಗಿ ಪೋಲೀಸರು ತಿಳಿಸಿ ಪಂಚನಾಮೆಗೆ ನನ್ನನ್ನು ಕರೆದಿದ್ದರು. ಚಾಸಾ-14 ರವರು ವೃತ್ತ ನಿರೀಕ್ಷಕರಾದ ಚಾಸಾ-26 ವಸಂತ ಆಚಾರರ ಮುಂದೆ ಬಂಗಾರದ ಆಭರಣಗಳನ್ನು ಹಾಜರು ಮಾಡಿರುತ್ತಾರೆ. ಸದರಿ ಆಭರಣಗಳನ್ನು ಠಾಣೆಯಲ್ಲಿ ಇದ್ದ ಕರ್ಕಿಯ ಮಹಾಲಕ್ಷ್ಮೀ ಜ್ಯುವೆಲರಿಯ ಶೇಟರು ತೂಕ ಮಾಡಿರುತ್ತಾರೆ. ನಂತರ ಪೋಲಿಸರು ದಾಖಲೆಯನ್ನು ಬರೆದುಕೊಂಡು ಪಂಚನಾಮೆ ಮಾಡಿ ನನ್ನ ಸಹಿ ಪಡೆದಿರುತ್ತಾರೆ. ಆ ಸಂದರ್ಭದಲ್ಲಿ ಛಾಯಾಚಿತ್ರ ತೆಗೆಸಿರುತ್ತಾರೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನಿಪಿ-7 ಛಾಯಾಚಿತ್ರವನ್ನು ಗುರುತಿಸಿರುತ್ತಾರೆ. ಚಾಸಾ-14 ಹಾಜರು ಮಾಡಿದ ಬಂಗಾರದ ಆಭರಣಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ಪ್ರಕರಣದಲ್ಲಿ ಹಾಜರು ಮಾಡಿರುವ ಮುಮಾ-1 ರಿಂದ 5 ನ್ನು ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃ ಶ್ರೀ ವಿಠ್ಠಲ ಎಂ. ಭಂಡಾರಿಯವರಿಂದಃ**

ನನ್ನ ಮನೆ ಹೊನ್ನಾವರದಿಂದ ಸುಮಾರು 9 ಕಿಲೋಮೀಟರ್ ದೂರದಲ್ಲಿರುತ್ತದೆ. ಸದರಿ ದಿನದಂದು ನಾನು ಔಷಧಿಗಳನ್ನು ಖರೀದಿಸಲು ಹೊನ್ನಾವರದ ಬಳಿ ಬಂದಿದ್ದಾಗ ಚಾಸಾ-26 ನನ್ನನ್ನು ಪಂಚನಾಮೆಗೆ ಬರಮಾಡಿಕೊಂಡಿರುತ್ತಾರೆ. ನಾನು ಠಾಣೆಗೆ ಹೋದಾಗ ಬಂಗಾರದ ಆಭರಣಗಳು ಚಾಸಾ-14 ರ ಕೈಯಲ್ಲೇ ಇದ್ದವು. ಆಭರಣಗಳ ಒಟ್ಟೂ ತೂಕ ಗೊತ್ತಿಲ್ಲ. ಪ್ರತಿ ಆಭರಣಗಳ ಪ್ರತ್ಯೇಕ ತೂಕ

ಸಹ ಗೊತ್ತಿಲ್ಲ. ಸುಮಾರು 8 ಐಟಂಗಳು ಇದ್ದವು. ಎಷ್ಟು ಕೇಸಿಗೆ ಸಂಬಂಧಿಸಿದ ಆಭರಣಗಳು ಎನ್ನುವುದು ಗೊತ್ತಿಲ್ಲ.

ಪಂಚನಾಮೆಯನ್ನು ನಾವು ಹೇಳಿದ್ದು ಪೋಲಿಸರು ಬರೆದಿರುತ್ತಾರೆ. ನಾನು ಠಾಣೆಗೆ ಹೋಗುವ ಪೂರ್ವದಲ್ಲಿ ಬೇರೆ 2–3 ಜನ ಸಾರ್ವಜನಿಕರು ಇದ್ದರು.

ಮುಖ್ಯ ವಿಚಾರಣೆಯಲ್ಲಿ ಹೇಳಿದ ದಿನಾಂಕದಂದು ನಾನು ಠಾಣೆಗೆ ಹೋಗಿಲ್ಲ ಮತ್ತು ಶೇಟರು ಯಾವುದೇ ಆಭರಣಗಳನ್ನು ಹಾಜರು ಮಾಡಿಲ್ಲ ಮತ್ತು ಅವುಗಳನ್ನು ಪೋಲಿಸರು ಜಪ್ತು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**